**Code No. : DDA-06**

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 3

## ಶ್ರೀ ಶಿವಕುಮಾರ ರಂಗಪ್ರಯೋಗ ಶಾಲೆ ಪರೀಕ್ಷೆ – 2020

## ಡಿಪ್ಲೋಮಾ ಇನ್ ಥಿಯೇಟರ್

# ಶಿಕ್ಷಣದಲ್ಲಿ ರಂಗಭೂಮಿ

## ಪತ್ರಿಕೆ – VI

ದಿನಾಂಕ : 07. 11. 2020 ]

ಸಮಯ : ಬೆಳಗ್ಗೆ 9.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 100

***ಎಲ್ಲಾ ವಿಭಾಗಗಳೂ ಕಡ್ಡಾಯ.***

### ವಿಭಾಗ – ಅ

ಈ ಕೆಳಗೆ ಕೊಟ್ಟಿರುವ ಯಾವುದಾದರೂ ***ಎರಡು*** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತೀ ಪ್ರಶ್ನೆಯ ಉತ್ತರಗಳು ಐದು ಪುಟಗಳಿಗೆ ಮೀರದಂತಿರಲಿ : 2 × 20 = 40

1. ಶಿಕ್ಷಣದ ಅರ್ಥ ಮತ್ತು ಸ್ವರೂಪಗಳನ್ನು ವಿವರಿಸಿ. ರಂಗಭೂಮಿ ಶಿಕ್ಷಣಕ್ಕೆ ಹೇಗೆ ಪೂರಕವಾಗಿದೆ ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸಿ.

2. ವ್ಯಕ್ತಿತ್ವ ಎಂದರೇನು ? ಸಮಸ್ಯಾ ನಿರ್ವಹಣೆಯಿಂದ ನಮ್ಮ ವ್ಯಕ್ತಿತ್ವ ಹೇಗೆ ವಿಕಸನವಾಗುತ್ತದೆ ವಿವರಿಸಿ.

3. ಮನಃಶಾಸ್ತ್ರ ಎಂದರೇನು ? ಮಾನವನ ವಿಕಾಸದ ಹಂತಗಳನ್ನು ಹೆಸರಿಸಿ. ಕಿಶೋರಾವಸ್ಥೆಯ ಯಾವುದಾದರೂ ಎರಡು ಪ್ರಮುಖ ಲಕ್ಷಣಗಳನ್ನು ವಿವರಿಸಿ.

4. ಸಂವಹನ ಎಂದರೇನು ? ಸಂವಹನೆಯ ಮುಖ್ಯ ಲಕ್ಷಣಗಳನ್ನು ರಂಗಭೂಮಿಯ ಅಭಿನಯದೊಂದಿಗೆ ಹೋಲಿಸಿ ಶಾಬ್ಧಿಕ ಮತ್ತು ಅಶಾಬ್ಧಿಕ ಸಂಹವನಗಳನ್ನು ವಿವರಿಸಿ.

### ವಿಭಾಗ – ಬ

ಈ ಕೆಳಗೆ ಕೊಟ್ಟಿರುವ ಯಾವುದಾದರೂ ***ನಾಲ್ಕು*** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತೀ ಪ್ರಶ್ನೆಯ ಉತ್ತರಗಳು ಮೂರು ಪುಟಗಳಿಗೆ ಮೀರದಂತಿರಲಿ : 4 × 10 = 40

5. 'ಶಿಕ್ಷಣ ಒಂದು ನಿರಂತರ ಪ್ರಕ್ರಿಯೆ'. ಚರ್ಚಿಸಿ.

6. ರಂಗಭೂಮಿ ಮತ್ತು ಶಿಕ್ಷಣ ಪೂರಕವಾಗಿವೆ ಎಂಬುದನ್ನು ವಿಷದೀಕರಿಸಿ ಬರೆಯಿರಿ.

7. 'ಸರ್ವತೋಮುಖ ವಿಕಾಸದಲ್ಲಿ ರಂಗಶಿಕ್ಷಣದ ಪಾತ್ರ'. ಈ ಬಗ್ಗೆ ಚರ್ಚಿಸಿ.

8. ಶಾಬ್ಧಿಕ ಮತ್ತು ಅಶಾಬ್ಧಿಕ ಸಂವಹನಗಳ ನಡುವಿನ ಸಂಬಂಧ ಕುರಿತು ಬರೆಯಿರಿ.

9. ಸಮಸ್ಯಾ ಪರಿಹಾರಕ್ಕಾಗಿ 'ಕ್ಷೇತ್ರ ಪ್ರವಾಸ'ವನ್ನು ಹೇಗೆ ಏರ್ಪಡಿಸುವಿರಿ ? ಚರ್ಚಿಸಿ.

10. ಬಯಲು ನಾಟಕದಲ್ಲಿ ಬಳಸಲಾಗುವ ಸಂವಹನ ಮಾಧ್ಯಮಗಳನ್ನು ಕುರಿತು ಬರೆಯಿರಿ.

11. ನಟನೆ ಮತ್ತು ವ್ಯಕ್ತಿತ್ವಗಳ ನಡುವಿನ ಸಂಬಂಧಗಳನ್ನು ವಿವರಿಸಿ ಬರೆಯಿರಿ.

12. ನಾಟಕ ರಂಗತಾಲೀಮು ಮತ್ತು ಜೀವನದಲ್ಲಿ ಯಶಸ್ಸುಗಳ ನಡುವಿನ ಸಂಬಂಧಗಳನ್ನು ಕುರಿತು ಬರೆಯಿರಿ.

## ವಿಭಾಗ – ಕ

ಈ ಕೆಳಗೆ ಕೊಟ್ಟಿರುವ ಯಾವುದಾದರೂ **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ. ಪ್ರತೀ ಟಿಪ್ಪಣಿಯು ಒಂದು ಪುಟಕ್ಕೆ ಮೀರದಂತಿರಲಿ : $4 \times 5 = 20$

13. ದಿನನಿತ್ಯದ ಜೀವನ ಮತ್ತು ನಾಟಕಗಳ ನಡುವಿನ ಸಂಬಂಧ

14. ಕಿಶೋರಾವಸ್ಥೆಯಲ್ಲಿ ದೈಹಿಕ ಬೆಳವಣಿಗೆಯ ಲಕ್ಷಣಗಳು

15. ಬೆಳವಣಿಗೆ ಮತ್ತು ವಿಕಾಸಗಳ ಮುಖ್ಯ ಲಕ್ಷಣಗಳು

16. ಸಂವಹನದಲ್ಲಿ ಮೌನದ ಪಾತ್ರ

17. ರಂಗಕಲೆಗೆ ಕ್ಷೇತ್ರಾಧ್ಯಯನದ ಪ್ರಯೋಜನಗಳು

18. ಪ್ರಯೋಗರಹಿತವಾದ ರಂಗ ಕಲಿಕೆ ಅಸಾಧ್ಯ